

بسم الله الرّحمٰن الرّحيم

# ಅಲ್ಲಾಹನ ಆಜ್ಞೆಯನ್ನು ಪಾಲಿಸಿ ಜನರಿಗೆ ಮಾದರಿಯಾಗಲು ಪ್ರಯತ್ನಿಸಿರಿ ಮತ್ತು ಅನ್ಯರಿಗೆ ಆ ಆಜ್ಞೆಗಳ ಬಗ್ಗೆ ನೆನಪು ಹುಟ್ಟಿಸುವವರಾಗಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**03-07-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನೀಡಿದ ಆಜ್ಞೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು, ಅವುಗಳನ್ನು ಪುನರಾವರ್ತಿಸುತ್ತಾ ಇರುವುದು, ಇತರರಿಗೆ ನೆನಪಿಸಿಕೊಡುವ ಹೊಣೆಗಾರಿಕೆ ಯಾರಿಗೆ ನೀಡಲಾಗಿದೆಯೋ ಅವರು ಅದನ್ನು ನೆನಪಿಸಿ ಕೊಡುತ್ತಾ ಇರುವುದು ಸತ್ಯವಿಶ್ವಾಸಿಗಳ ಜಮಾಅತಿನ ಕೆಲಸವಾಗಿದೆ. ಇಂತಹ ಹೊಣೆಗಾರಿಕೆ ಹೊಂದಿದವರಲ್ಲಿ ಮುರಬ್ಬಿಗಳೂ ಹುದ್ದೇದಾರರೂ ಸೇರಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ವ್ಯವಸ್ಥೆಯಲ್ಲಿ ಒಂದು ಕೇಂದ್ರ ವ್ಯವಸ್ಥೆ ಸಹ ಇದೆ. ಅದಲ್ಲದೆ ಅಧೀನ ಸಂಘಟನೆಗಳ ವ್ಯವಸ್ಥೆ ಸಹ ಇದೆ. ಜಮಾಅತಿನ ಕೇಂದ್ರ ವ್ಯವಸ್ಥೆಯಲ್ಲಿಯೂ ಅದೇರೀತಿ ಅಧೀನ ಸಂಘಟನೆಗಳಲ್ಲಿಯೂ ಕೇಂದ್ರಮಟ್ಟದಿಂದ ಪ್ರಾರಂಭಿಸಿ ಸ್ಥಳೀಯ ಘಟಕಗಳ ತನಕ ಹುದ್ದೇದಾರರು ನೇಮಿಸಲ್ಪಟ್ಟದ್ದಾರೆ. ಪ್ರತಿಯೊಬ್ಬ ಹುದ್ದೇದಾರರಿಂದ ಪ್ರತೀಕ್ಷಿಸುವುದೇನೆಂದರೆ ಅವರು ಖಿಲಾಫತ್ತಿನ ಕೈಗಳೂ ತೋಳುಗಳೂ ಆಗಿ ಖಿಲಾಫತ್ತಿನ ಹೊಣೆಗಾರಿಕೆಗಳನ್ನು ವಿಸ್ತಾರವಾಗಿ ಈಡೇರಿಸಲು ಪ್ರಯತ್ನಿಸಬೇಕು. ಈ ವಿಷಯವನ್ನು ಎಲ್ಲಾ ಮುರಬ್ಬಿಗಳೂ ಹುದ್ದೇದಾರರೂ ಮನವರಿಕೆ ಮಾಡಿಕೊಂಡರೆ ಒಂದು ಕ್ರಾಂತಿದಾಯಕ ಬದಲಾವಣೆ ಜಮಾಅತಿನಲ್ಲಿ ಉಂಟಾಗಬಹುದಾಗಿದೆ. "ಅಲ್ಲಾಹನ ಆಜ್ಞೆಗಳನ್ನು ಜನರಿಗೆ ನೆನಪಿಸಿಕೊಡಲು ಮತ್ತು ಅವುಗಳನ್ನು ಈಡೇರಿಸುವ ಪ್ರಜ್ಞೆ ಉಂಟುಮಾಡಲು ಅಲ್ಲಾಹನು ನನಗೆ ನನ್ನ ಇಷ್ಟಪ್ರಕಾರ ಜಮಾಅತಿಗೋಸ್ಕರ ಜೀವಾರ್ಪಣೆ ಮಾಡಿ ಸೇವೆ ಸಲ್ಲಿಸುವ ಭಾಗ್ಯವನ್ನು ನೀಡಿರುತ್ತಾನೆ. ನಾನು ಎಲ್ಲದಕ್ಕಿಂತ ಮೊದಲು ನನ್ನನ್ನೇ ಪರಿಶೋಧಿಸುವೆನು. ಅಲ್ಲಾಹನ ಆಜ್ಞೆಯನ್ನು ಪಾಲಿಸಿ ಜನರಿಗೆ ಮಾದರಿಯಾಗಲು ಪ್ರಯತ್ನ ಮಾಡುತ್ತಿದ್ದೇನೋ ಅನ್ಯರಿಗೆ ಆ ಆಜ್ಞೆಗಳ ಬಗ್ಗೆ ನೆನಪು ಹುಟ್ಟಿಸುತ್ತಿರುವೆನೋ ಅದು ನನಗೆ ಸಾಧ್ಯವಾಗುತ್ತಿದೆಯೋ" ಎಂದು ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕಾಗಿದೆ. ನಾನು ಕೇವಲ ಅನ್ಯರಿಗೆ ನೆನಪಿಸಿಕೊಡುತ್ತಾ ಇದ್ದೇನೆ, ಆದರೆ ನನ್ನ ಕೆಲಸ ಅವುಗಳಿಗೆ ವಿರುದ್ಧವಾಗಿದ್ದರೆ ಅಥವಾ ಅವುಗಳಿಂದ ದೂರವಾಗಿದ್ದರೆ ಅದು ಬಹಳ ಭಯಪಡಬೇಕಾದ ಸ್ಥಿತಿಯಾಗಿದೆ. ಇಸ್ತಿಗ್‌ಫಾರ್ ಮಾಡಬೇಕಾದ ಆವಶ್ಯಕತೆ ಇರುತ್ತದೆ. ಇಸ್ತಿಗ್‌ಫಾರ್ ಪ್ರಾರ್ಥನೆಯಂತೂ ಯಾವಾಗಲೂ ಮಾಡಬೇಕಾಗಿದೆ. ಆದರೆ ಇಂತಹ ಸಂದರ್ಭಗಳಲ್ಲಿ ಬಹಳ ಹೆಚ್ಚು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಬೇಕಾದ ಆವಶ್ಯಕತೆಯಿದೆ. ಯಾವುದೇ ಹುದ್ದೇದಾರ, "ಉಪದೇಶ ನೀಡುವುದು ನನ್ನ ಕೆಲಸವಲ್ಲ" ಎಂದು ಯೋಚಿಸಬಾರದು. ಪ್ರತಿಯೊಬ್ಬ ಸೆಕ್ರಟರಿ – ಝಿಯಾಫತ್ ಸೆಕ್ರಟರಿಯಾಗಿರಲಿ ಅಥವಾ ಅಧೀನ ಸಂಘಟನೆಯ ಖಿದ್‌ಮತೆ ಖಲ್‌ಖ್ ಸೆಕ್ರಟರಿಯಾಗಿರಲಿ ಅಥವಾ ಆಟೋಟಗಳ ಮೇಲ್ವಿಚಾರಕನಾಗಿರಲಿ ಯಾರೇ ಆಗಲಿ, ಪ್ರತಿಯೊಬ್ಬರು ತನ್ನ ಕೆಲಸದಿಂದ ಮಾದರಿ ತೋರಿಸಬೇಕು. ಹೀಗೆ ಮಾಡುವುದಾದರೆ, ನಾನು ಇದರ ಮೊದಲು ಹಲವು ಸಲ ಹೇಳಿದಂತೆ, ನಮ್ಮ ಜಮಾಅತಿನ ಶೇಕಡಾ ಐವತ್ತಕ್ಕಿಂತ ಹೆಚ್ಚು ಸಂಖ್ಯೆಯ ಜನರು ಅಲ್ಲಾಹನ ಅನುಗ್ರಹದಿಂದ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾಗುವರು. ಮಸ್‌ಜಿದ್‌ಗಳಿಗೆ ನಮಾಝ್‌ಗೋಸ್ಕರ ಹೋಗುವ ವಿಷಯಕ್ಕೆ ಸಂಬಂಧಿಸಿಯೂ, ಜಮಾಅತಿಗೋಸ್ಕರ ತ್ಯಾಗ ಮಾಡುವ ವಿಷಯಕ್ಕೆ ಸಂಬಂಧಿಸಿಯೂ, ಜನರ ಹಕ್ಕುಗಳನ್ನು ಈಡೇರಿಸಿಕೊಡುವ ವಿಷಯದಲ್ಲಿಯೂ ಹಾಗೆ ಪ್ರತಿಯೊಂದು ವಿಷಯದಲ್ಲೂ ಈ ಬದಲಾವಣೆ ಉಂಟಾಗುವುದು. ಜಮಾಅತಿಗೋಸ್ಕರ ಸೇವೆ ಸಲ್ಲಿಸುತ್ತಿರುವ ಪ್ರತಿಯೊಬ್ಬನು ಮೊದಲು ತನ್ನೊಳಗೆ ನೋಡಬೇಕು. ನಾನು ಅಲ್ಲಾಹನ ಆಜ್ಞೆಗಳನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದೇನೆ ಎಂದು ನೋಡಬೇಕು. ಅವುಗಳನ್ನು ಮೆಲುಕು ಹಾಕಿಕೊಂಡು ತನ್ನ ಸ್ಥಿತಿಯನ್ನು ಸುಧಾರಣೆ ಮಾಡಬೇಕು. ಅನಂತರ ಅನ್ಯರಿಗೆ ಉಪದೇಶಿಸಬೇಕು. ಇದೇ ರೀತಿ ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯ ಕರ್ತವ್ಯವಾಗಿದೆ 'ನಾನು ನನ್ನಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ್ದೇನೆ' ಎಂದು ವಾದಿಸುವ ಅಹ್ಮದಿ, ಅಲ್ಲಾಹನ ಆಜ್ಞೆಗಳನ್ನು ನೋಡಿಕೊಂಡು ಅವುಗಳನ್ನು ಪದೇ ಪದೇ ಪುನರಾವರ್ತಿಸುತ್ತಾ ತನ್ನೆದುರಿಗೆ ತರುತ್ತಾ ಇರಬೇಕು. ನಾವು ಹೀಗೆ ಮಾಡಲು ಪ್ರಾರಂಭಿಸಿದರೆ ನಾವು ಬೃಹತ್ತಾದ ಬದಲಾವಣೆಯನ್ನು ಉಂಟುಮಾಡಬಲ್ಲೆವು. ನಾವು ನಮ್ಮನ್ನು ಸುಧಾರಣೆ ಮಾಡುವವರು ಮಾತ್ರವಲ್ಲ, ಲೋಕಕ್ಕೆ ಉತ್ತಮ ಮಟ್ಟದ ನೈತಿಕ ಗುಣಗಳನ್ನು ತೋರಿಸಿ ಕೊಡುವವರೂ ಆಗ ಬಲ್ಲೆವು. ನಾವು ಈ ವಿಷಯದ ಬಗ್ಗೆ ವಿಶಿಷ್ಟ ಶ್ರದ್ಧೆ ನೀಡಬೇಕಾಗಿದೆ. ಅಲ್ಲಾಹನ ಆಜ್ಞೆಗಳನ್ನು ಅರಿತುಕೊಂಡು ಅವುಗಳನ್ನು ಕೃತಿರೂಪಕ್ಕೆ ತರಬೇಕಾಗಿದೆ.

ಕಳೆದ ವಾರದ ಖುತ್‌ಬದಲ್ಲಿ ನಾನು ಒಬ್ಬ ಸತ್ಯವಿಶ್ವಾಸಿಯಲ್ಲಿ ಆವಶ್ಯಕವಾಗಿ ಇರಬೇಕಾದ ವೈಶಿಷ್ಟ್ಯತೆಗಳ ಬಗ್ಗೆ ಪ್ರಸ್ತಾಪಿಸಿದ್ದೆನು. ಇಂದು ಸಹ ನಾನು ಕೆಲವು ವಿಷಯಗಳನ್ನು ವಿವರಿಸುವೆನು. ರಮಝಾನ್ ತಿಂಗಳು ಮನುಷ್ಯನ ಸುಧಾರಣೆ ಮಾಡಲು ಬಹಳ ದೊಡ್ಡದಾದೊಂದು ಮಾರ್ಗವಾಗಿದೆ. ರಮಝಾನ್ ತಿಂಗಳು ನಮ್ಮ ಆರಾಧನೆ

ಬಗ್ಗೆ ಗಮನ ಹರಿಸುವ ತಿಂಗಳಾಗಿರುವುದರ ಜೊತೆಗೆ ನಮ್ಮ ಬಲಹೀನತೆಗಳ ಕಡೆಗೆ ಗಮನಹರಿಸುವಂತೆ ಮಾಡಿ ಅವುಗಳನ್ನು ಸುಧಾರಣೆ ಮಾಡುವ ತಿಂಗಳೂ ಆಗಿದೆ. ಆದುದರಿಂದ ನಾವು ಈ ತಿಂಗಳಲ್ಲಿ ನಮ್ಮ ಬಲಹೀನತೆಗಳನ್ನು ಗುರುತಿಸಿಕೊಂಡು ಅಲ್ಲಾಹನ ಆಜ್ಞೆಗಳನ್ನು ಮೆಲುಕು ಹಾಕಿಕೊಂಡು ಸುಧಾರಣೆ ಮಾಡಲು ಧಾರಾಳ ಪ್ರಯತ್ನ ಮಾಡಬೇಕು. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಆಧ್ಯಾತ್ಮಿಕ ಮಟ್ಟ ಬಹಳ ಉನ್ನತವಾಗಿರಬೇಕಾಗಿದೆ. ಧರ್ಮಬದ್ಧ ಕಾರಣಗಳಿಲ್ಲದೆ ಉಪವಾಸವನ್ನು ಬಿಟ್ಟುಬಿಡಬಾರದು. ಇದೇ ರೀತಿ ರಮಝಾನಿನ ಉದ್ದೇಶಲಕ್ಷ್ಯವಾಗಿರುವ ಆರಾಧನೆಗಳನ್ನು ಅತ್ಯುತ್ತಮ ರೀತಿಯಲ್ಲಿ ಅನುಷ್ಠಿಸಲು ಪ್ರಯತ್ನ ಮಾಡಬೇಕಾಗಿದೆ. ಇದೇ ರೀತಿ ಈ ತಿಂಗಳಲ್ಲಿ ಪವಿತ್ರ ಖುರ್‌ಆನ್ ಹೆಚ್ಚು ಹೆಚ್ಚಾಗಿ ಓದುವುದು ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಯಾಗಿದೆ. ಎಲ್ಲರೂ ಪವಿತ್ರ ಖುರ್‌ಆನ್ ಓದುವುದರ ಬಗ್ಗೆ ಲಕ್ಷ್ಯ ನೀಡಬೇಕು. ಅದರಲ್ಲಿರುವ ಆಜ್ಞೆಗಳನ್ನು ಹುಡುಕಿ ಅವುಗಳನ್ನೂ ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ಅಹ್ಮದಿ ಪವಿತ್ರ ಖುರ್‌ಆನ್ ಹೆಚ್ಚು ಹೆಚ್ಚಾಗಿ ಓದಲು ಪ್ರಯತ್ನಿಸಬೇಕು. ನಮಾಝ್ ಮತ್ತು ಇತರ ಆರಾಧನೆಗಳು ಕಡ್ಡಾಯವಾದುದೇ ಆಗಿದೆ. ಆದರೆ ರಮಝಾನಿನಲ್ಲಿ ಈ ಆರಾಧನೆಗಳಿಗೆ, ನಮಾಝ್‌ಗಳಿಗೆ ಹೆಚ್ಚು ಸೌಂದರ್ಯ ಉಂಟು ಮಾಡಲು ಪ್ರಯತ್ನಿಸಬೇಕು. ಅದೇ ರೀತಿ ಹೆಚ್ಚು ಹೆಚ್ಚಾಗಿ ಅಲ್ಲಾಹನ ನಾಮ ಸ್ಮರಣೆಯಿಂದ ನಮ್ಮ ನಾಲಗೆಗಳನ್ನು ಪುನೀತಗೊಳಿಸಲು ಪ್ರಯತ್ನಿಸಬೇಕಾಗಿದೆ.

ನೀವು ನೆನಪಿಡಬೇಕು ಅಲ್ಲಾಹನ ದೃಷ್ಟಿ ನಮ್ಮ ಹೃದಯದ ಆಳಗಳ ತನಕವಿರುತ್ತದೆ. ಅವನು ನಮ್ಮ ಸಂಕಲ್ಪಗಳನ್ನು ಸಹ ಅರಿತುಕೊಂಡಿರುತ್ತಾನೆ. ಅವನು ನಮ್ಮ ಕರ್ಮಗಳನ್ನು ನಮ್ಮ ಸಂಕಲ್ಪಗಳ ಪ್ರಕಾರ ನೋಡುತ್ತಾನೆ. ಆದುದರಿಂದ ನಾವು ಮಸ್‌ಜಿದ್‌ಗಳನ್ನು ಜನರಿಂದ ತುಂಬಿಸುವ ಬಗ್ಗೆ ಮತ್ತು ಆರಾಧನೆಯ ಬಗ್ಗೆ ಮನಸ್ಸಿನಲ್ಲಿ ದೃಢ ಸಂಕಲ್ಪ ಹೊಂದಬೇಕಾಗಿದೆ. ನಾವು ಅಲ್ಲಾಹನ ಭಯಭಕ್ತಿ ಹೊಂದಬೇಕು. ಈ ತಿಂಗಳು ನಾವು ಮಾಡುವ ಆರಾಧನೆಗಳನ್ನು ನಂತರ ನಮ್ಮ ಜೀವಿತದ ಭಾಗವನ್ನಾಗಿ ಮಾಡಲು ಪ್ರಯತ್ನಿಸಬೇಕು. ಈ ತಿಂಗಳಲ್ಲಿ ನಮಗೆ ತಹಜ್ಜುದ್ ನಮಾಝ್ ಮಾಡುವ ಅಭ್ಯಾಸವಾದರೆ ಮತ್ತು ಹಗಲು ಹೊತ್ತು ನಫ್ಲ್ ನಮಾಝ್ ಮಾಡುವ ಕಡೆಗೆ ಶ್ರದ್ಧೆ ಉಂಟಾದರೆ ಈ ಅಭ್ಯಾಸವನ್ನು ಸ್ಥಿರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

**ಯಾ ಅಯ್ಯುಹನ್ನಾಸುಅ್‌ಬುದೂ ರಬ್ಬಕುಮುಲ್ಲಝೀ ಖಲಖಕುಮ್ ವಲ್ಲಝೀನ ಮಿನ್ ಖಬ್‌ಲಿಕುಮ್ ಲಅಲ್ಲಕುಮ್ ತತ್ತಖೂನ್**

"ಓ ಜನರೇ, ನಿಮ್ಮನ್ನೂ ನಿಮಗಿಂತ ಮುಂಚಿನವರನ್ನೂ ಸೃಷ್ಟಿಸಿದ ನಿಮ್ಮ ರಕ್ಷಕನನ್ನು ಆರಾಧಿಸಿರಿ– ನೀವು ತಖ್ವವುಳ್ಳವರಾಗಲಿಕ್ಕಾಗಿ." (ಪವಿತ್ರ ಖುರ್‌ಆನ್ 2: 22)

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: "ಓ ಜನರೇ ನಿಮ್ಮನ್ನು ಸೃಷ್ಟಿಸಿದ ಅಲ್ಲಾಹನನ್ನು ಆರಾಧಿಸಿರಿ. ಯಾರು ನಿಮ್ಮನ್ನು ಸೃಷ್ಟಿಸಿರುವನೋ ಅವನೇ ನಿಮ್ಮ ಆರಾಧನೆಗೆ ಅರ್ಹನು. ಅವನೇ ಶಾಶ್ವತವಾಗಿ ಜೀವಿಸಿರುವವನು. ಅವನೊಂದಿಗೆ ಹೃದಯ ಜೋಡಿಸಿರಿ."

ಸತ್ಯವಿಶ್ವಾಸವೆಂದರೆ ಅಲ್ಲಾಹನೊಂದಿಗೆ ವಿಶಿಷ್ಟ ಸಂಬಂಧ ಸ್ಥಾಪಿಸುವುದಾಗಿದೆ. ಇತರ ಎಲ್ಲ ವಸ್ತುಗಳನ್ನು ಅವನೆದುರಿಗೆ ನಿಷ್ಪ್ರಯೋಜಕ ಎಂದು ಗಣಿಸಬೇಕು. ಅಲ್ಲಾಹನೇ ನಮ್ಮನ್ನು ಸೃಷ್ಟಿಸಿದನು ಎಂಬುದು ನಮ್ಮ ದೃಢ ನಂಬಿಕೆಯಾಗಿದೆ. ಅವನೇ ಶಾಶ್ವತವಾಗಿರುವವನು. ಅವನು ಜೀವಂತ ದೇವನಾಗಿದ್ದಾನೆ. ಅವನು ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಅವನೊಂದಿಗೆ ಹೃತ್ಪೂರ್ವಕ ಸಂಬಂಧ ಸ್ಥಾಪಿಸಬೇಕು ಎಂಬುದು ನಮ್ಮ ದೃಢ ವಿಶ್ವಾಸವಾಗಿದೆ. ಹೀಗಿದ್ದರೂ ನಮ್ಮ ಪೈಕಿ ಬಹುತೇಕ ಜನರು ಅಲ್ಲಾಹನೊಂದಿಗೆ ವಿಶಿಷ್ಟ ಸಂಬಂಧ ಸ್ಥಾಪಿಸಲು ಪ್ರಯತ್ನಿಸುವುದಿಲ್ಲ. ಅಂತಹ ಸಂಬಂಧ ಸ್ಥಾಪಿಸುವ ಆವಶ್ಯಕತೆ ಇದೆ. ಆ ಸಂಬಂಧ, ನಮ್ಮ ಇತರ ಎಲ್ಲ ಸಂಬಂಧಗಳನ್ನು ನಿಸ್ಸಾರವೆಂದು ಗಣಿಸುವಂತೆ ಮಾಡಲಿ. ರಮಝಾನಿನಲ್ಲಿ ಅದರ ವಾತಾವರಣದ ಪ್ರಭಾವದಿಂದಾಗಿ ಅಲ್ಲಾಹನ ಕಡೆಗೆ ಹೆಜ್ಜೆ ಹಾಕಲು ಜನರು ತೊಡಗುತ್ತಾರೆ. ಆದರೆ ರಮಝಾನಿನ ನಂತರ ಕ್ರಮೇಣ ಬಹುತೇಕ ಜನರ ಪಾದಗಳು ನಿಂತು ಬಿಡುತ್ತವೆ.

ಆದುದರಿಂದ ನಾವು ನಮ್ಮ ಕರ್ಮಗಳ ಮೂಲಕ ಅಲ್ಲಾಹನ ಹೊರತು ಇತರ ಎಲ್ಲವೂ ನಗಣ್ಯವಾಗಿದೆ ಎಂದು ಸಾಬೀತುಗೊಳಿಸಲು ಪ್ರಯತ್ನಿಸಬೇಕು. ಇದನ್ನು ಮನವರಿಕೆ ಮಾಡಿಕೊಳ್ಳಲು ನಮ್ಮಲ್ಲಿ ತಖ್ವ (ಭಯಭಕ್ತಿ) ಉಂಟು ಮಾಡಬೇಕಾದುದು ಆವಶ್ಯಕವಾಗಿದೆ. ನಾನು ಪಠಿಸಿದ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ನಿಮ್ಮಲ್ಲಿ ತಖ್ವ (ಭಯಭಕ್ತಿ) ಉಂಟಾಗಲಿಕ್ಕಾಗಿ ನೀವು ಅವನನ್ನು ಆರಾಧಿಸಿರಿ ಎಂದು. ಆರಾಧನೆಯ ಉದ್ದೇಶ ಅಲ್ಲಾಹನನ್ನು ಗುರುತಿಸಿ ಕೊಳ್ಳುವುದು ಮಾತ್ರವಲ್ಲ ತಖ್ವ (ಭಯಭಕ್ತಿ) ಹೊಂದಿ ಆಧ್ಯಾತ್ಮಿಕ ಉನ್ನತಿಯನ್ನು ಗಳಿಸುವುದಾಗಿದೆ. ಅಲ್ಲಾಹನ ಗುಣ ವಿಶೇಷಗಳ ಬಗ್ಗೆ ಜ್ಞಾನವನ್ನು ಗಳಿಸುವುದಾಗಿದೆ. ಅವನ ಗುಣಗಳ ಬಗ್ಗೆ ಜ್ಞಾನ ಲಭಿಸಿದರೆ ಪ್ರತಿಯೊಂದು ವಸ್ತು ಅದರೆದುರಿಗೆ ಅನಾವಶ್ಯಕವಾಗುತ್ತದೆ. ನಾವು ಅಲ್ಲಾಹನನ್ನು ಆರಾಧಿಸುವುದರ ಮೂಲಕ ಅವನ ಗುಣ ವಿಶೇಷಗಳಿಂದ ಆಧ್ಯಾತ್ಮಿಕ ಅನುಗ್ರಹ ಗಳಿಸುತ್ತೇವೆ. ಮತ್ತು ನಮ್ಮ ತಖ್ವ ವರ್ಧಿಸುತ್ತದೆ. ಹಾಗೆ ನಮ್ಮ ತಖ್ವ ವರ್ಧಿಸಿದರೆ ನಮ್ಮ ಆರಾಧನೆಗಳು ಕೇವಲ ರಮಝಾನಿಗೆ ಸೀಮಿತವಾಗಲಾರದು. ವರ್ಷವಿಡೀ ಮತ್ತು ಜೀವಮಾನವಿಡೀ ಅದು ಆವರಿಸುವುದು. ಆದುದರಿಂದ ನಾವು ಈ

ಯೋಚನೆಯೊಂದಿಗೆ ನಮ್ಮ ಆರಾಧನೆಯ ಕಡೆಗೆ ಶ್ರದ್ಧೆ ನೀಡುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: "ಮನುಷ್ಯನನ್ನು ಸೃಷ್ಟಿ ಮಾಡಿದ ಪರಮ ಉದ್ದೇಶ ಆರಾಧನೆಯೇ ಆಗಿದೆ. ಅಲ್ಲಾಹನು ಹೇಳಿದ್ದಾನೆ– **ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್.** "ಜಿನ್ನ್ ಮತ್ತು ಇನ್ಸ್‌ಗಳನ್ನು ನನ್ನ ಆರಾಧನೆಗೋಸ್ಕರ ಮಾತ್ರ ಸೃಷ್ಟಿಸಿರುವೆನು" ಎಂದು. ಮನುಷ್ಯನು ತನ್ನ ಹೃದಯದಿಂದ ಎಲ್ಲ ವಿಧಗಳ ಮಾಲಿನ್ಯಗಳನ್ನು ದೂರಸರಿಸಿ, ರೈತ ತನ್ನ ಜಮೀನನ್ನು ಕಸಕಡ್ಡಿಗಳಿಂದ ಮುಕ್ತಗೊಳಿಸುವ ಹಾಗೆ ನಾವು ನಮ್ಮ ಹೃದಯಗಳನ್ನು ಸ್ವಚ್ಛಗೊಳಿಸಬೇಕಾಗಿದೆ."

ಆದುದರಿಂದ ನಾವು ಯಾವಾಗಲೂ ಜಾಗರೂಕರಾಗಿರಬೇಕು. ನಮ್ಮ ಆರಾಧನೆಗಳ ಮೇಲ್ವಿಚಾರಣೆಯನ್ನು ಮಾಡಿಕೊಂಡು ಅದನ್ನು ಸಂರಕ್ಷಿಸುವ ಆವಶ್ಯಕತೆ ಇದೆ. ಹಾಗೆ ಮಾಡಿದರೆ ನಾವು ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳುವವರಾಗುವೆವು ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯನ್ನು ಗಳಿಸುವವರೂ ಆಗುವೆವು.

ಅಲ್ಲಾಹನು ನಮಗೆ ನೀಡಿದ ಮತ್ತೊಂದು ಆಜ್ಞೆ ಈ ರೀತಿಯಿದೆ– **ಯಾ ಅಯ್ಯುಹಲ್ಲಝೀನ ಆಮನೂ ಲಾ ತಖೂನುಲ್ಲಾಹ ವರ್‍ರಸೂಲ ವ ತಖೂನೂ ಅಮಾನಾತಿಕುಮ್ ವ ಅನ್‌ತುಮ್ ತಅ್‌ಲಮೂನ್.** "ಸತ್ಯ ವಿಶ್ವಾಸಿಗಳೇ, ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ನೀವು ವಂಚಿಸಬೇಡಿರಿ. ಅದೇರೀತಿ ನೀವು ತಿಳಿದೂ ತಿಳಿದೂ ನಿಮ್ಮ ಅಮಾನತ್‌ಗಳ ಬಗ್ಗೆ ಸಹ ವಂಚನೆ ಮಾಡಬೇಡಿರಿ." ಇದು ಬಹಳ ಶ್ರದ್ಧಾರ್ಹವಾದ ವಿಷಯವಾಗಿದೆ. ವಂಚನೆ ಎಂಬುದು ಕೇವಲ ದೊಡ್ಡ ದೊಡ್ಡ ವಿಷಯಗಳಿಗೆ ಸಂಬಂಧಿಸಿ ಅಥವಾ ದೊಡ್ಡ ಕೆಲಸಗಳಿಗೆ ಸಂಬಂಧಿಸಿ ಮಾತ್ರವಲ್ಲ ಚಿಕ್ಕಪುಟ್ಟ ವಿಷಯಗಳಿಂದ ಪ್ರಾರಂಭಿಸಿ ದೊಡ್ಡ ದೊಡ್ಡ ಕೆಲಸಗಳ ತನಕ ಅದು ವ್ಯಾಪಿಸಿರುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಪರಿಶುದ್ಧ ಜಮಾಅತನ್ನು ಸ್ಥಾಪಿಸಲು ಆಗಮಿಸಿದ್ದರು. ಅವರು ತನ್ನ ಬೈಅತ್ ಶರ್ತಗಳಲ್ಲಿ ದ್ವಿತೀಯ ಶರ್ತವಾಗಿ ವಿಶ್ವಾಸ ವಂಚನೆ ಮಾಡದಿರಲು ಮತ್ತು ಅದರಿಂದ ದೂರ ಸರಿಯುವ ಪ್ರತಿಜ್ಞೆಯನ್ನು ನಮ್ಮಿಂದ ಮಾಡಿಸಿದ್ದಾರೆ. ಪ್ರತಿಯೊಂದು ಕೆಟ್ಟ ಕೆಲಸ ಅದು ಚಿಕ್ಕದಾಗಿರಲಿ ದೊಡ್ಡದಾಗಿರಲಿ ಕೆಟ್ಟ ಕೆಲಸವೇ ಆಗಿರುತ್ತದೆ. ಕೆಲವು ಕೆಡುಕುಗಳು ಹೇಗೆ ಇರುತ್ತವೆ ಎಂದರೆ ಅದು ಇತರ ಕೆಟ್ಟ ಕೆಲಸಗಳಿಗೆ ಜನ್ಮ ನೀಡುತ್ತವೆ. ವಿಶ್ವಾಸ ವಂಚನೆ ಇಂತಹ ಕೆಡುಕುಗಳಲ್ಲಿ ಒಂದಾಗಿದೆ. ಅಲ್ಲಾಹನು ಹೇಳುತ್ತಾನೆ– ವಂಚನೆಯ ಸ್ವಭಾವದ ಕಾರಣ ಸ್ವಂತ ಕರ್ತವ್ಯಗಳಲ್ಲೂ ವಂಚನೆಯುಂಟಾಗುವಂತೆ ಮಾಡುತ್ತದೆ. ವಂಚಕನು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಹಕ್ಕುಗಳನ್ನು ಈಡೇರಿಸಲಾರನು. ಮತ್ತು ಜನರ ಹಕ್ಕುಗಳನ್ನು ಈಡೇರಿಸಿ ಕೊಡುವವನೂ ಆಗಲಾರನು. ಇದರ ಪರಿಣಾಮವಾಗಿ ಅಂತಹ ವ್ಯಕ್ತಿಯ ಆರಾಧನೆಗಳನ್ನು ಸಹ ಅಲ್ಲಾಹನು ಅಂಗೀಕರಿಸುವುದಿಲ್ಲ. ಅಲ್ಲಾಹನ ಆರಾಧಕನಾಗುವುದು ಬಹಳ ದೊಡ್ಡ ವಿಷಯವಾಗಿದೆ. ಒಬ್ಬ ವಂಚಕನನ್ನು ವಿಶ್ವಾಸಿ ಎಂದು ಸಹ ಹೇಳಲಿಕ್ಕಾಗದು. ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ– "ಯಾರ ಕೈ ಮತ್ತು ನಾಲಗೆಯಿಂದ ಇತರ ಮನುಷ್ಯರು ಸುರಕ್ಷಿತರಾಗಿರುತ್ತಾರೋ ಅವನೇ ಯಥಾರ್ಥ ವಿಶ್ವಾಸಿ."

ಒಟ್ಟಿನಲ್ಲಿ ಪ್ರತಿಯೊಬ್ಬ ಮನುಷ್ಯನ ಹಕ್ಕುಗಳನ್ನು ಈಡೇರಿಸಿಕೊಡುವುದು ಮುಸ್ಲಿಮನಿಗೆ ಕಡ್ಡಾಯವಾಗಿದೆ. ಹಕ್ಕುಗಳನ್ನು ಈಡೇರಿಸಿಕೊಡದಿದ್ದರೆ ಅವನನ್ನು ಅದು ವಂಚಕನನ್ನಾಗಿ ಮಾಡುತ್ತದೆ. ಪ್ರತಿಯೊಬ್ಬ ಅಹ್ಮದಿ ಜಮಾಅತ್ ವ್ಯವಸ್ಥೆಗೆ ಬದ್ಧನಾಗಿರಬೇಕಾಗಿದೆ. ಅವನು ತನ್ನ ಬೈಅತ್ ಪ್ರತಿಜ್ಞೆಯನ್ನು ಈಡೇರಿಸಬೇಕಾಗಿದೆ. ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ತನ್ನ ಸಂಘಟನೆಯ ಇಜ್ತಿಮಾಗಳಲ್ಲಿ ಪ್ರತಿಜ್ಞೆ ಮಾಡುತ್ತಾನೆ– ಅವನು ಜಮಾಅತ್ ವ್ಯವಸ್ಥೆಗೆ ಬದ್ಧನಾಗುವೆನು ಎಂದು. ಈ ಪ್ರತಿಜ್ಞೆ ಸಹ ಒಂದು ಅಮಾನತ್ ಆಗಿದೆ. ಅದನ್ನು ಈಡೇರಿಸುವುದು ಆವಶ್ಯಕವಾಗಿದೆ. ತನ್ನ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಪ್ರತಿಜ್ಞೆ ಈಡೇರಿಸಬೇಕಾದುದು ಆವಶ್ಯಕವಾಗಿದೆ. ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪನೆ ಮತ್ತು ಅನುಸರಣೆಯು ಸಹ ಆವಶ್ಯಕವಾಗಿದೆ. ಅದನ್ನು ಸಹ ಪ್ರತಿಜ್ಞೆಯಲ್ಲಿ ಪುನರಾವರ್ತಿಸಲಾಗುತ್ತಿದೆ. ಕುಟುಂಬ ಸಂಬಂಧವಾದ ವಿಷಯಗಳಲ್ಲೂ ಅಮಾನತ್ ಬಗ್ಗೆ ಶ್ರದ್ಧೆ ವಹಿಸಬೇಕಾಗಿದೆ. ವಧು ಮತ್ತು ವರ ವಿವಾಹವಾಗುವಾಗ ಒಬ್ಬರಿನ್ನೊಬ್ಬರಿಗೆ ಈಡೇರಿಕೊಡಬೇಕಾದ ಹಕ್ಕುಗಳಿರುತ್ತವೆ. ಈ ಹಕ್ಕುಗಳ ಈಡೇರಿಸಿಕೊಡುವಿಕೆ ಸಹ ಅಮಾನತ್ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಬಗ್ಗೆ ಎಷ್ಟರವರೆಗೆ ಒತ್ತಿ ಹೇಳಿದ್ದಾರೆಂದರೆ– "ಒಬ್ಬನು ವಿವಾಹವಾಗುವಾಗ ಮಹರ್ ನಿಶ್ಚಯಿಸಿದರೂ ಅದನ್ನು ಕೊಡುವುದಿಲ್ಲ ಎಂದು ಮನಸ್ಸಿನಲ್ಲಿ ನಿರ್ಧರಿಸುವುದಾದರೆ ಅವನು ವ್ಯಭಿಚಾರ ಮಾಡಿದಂತೆ ಆಗುತ್ತದೆ." ಎಂದು ಹೇಳಿದ್ದಾರೆ. ಒಬ್ಬನು ಸಾಲವಾಗಿ ಹಣ ಪಡೆಯುವಾಗ ಅದನ್ನು ಮರಳಿ ಕೊಡುವುದಿಲ್ಲ ಎಂದು ನಿರ್ಧರಿಸುವುದಾದರೆ ಅವನು ಕಳ್ಳನಾಗುತ್ತಾನೆ. ನೋಡಿರಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಮಾನತನ್ನು ಎಂತಹ ಮಟ್ಟಕ್ಕೇರಿಸಿದ್ದರೆಂದರೆ ಅವರು ಹೇಳುತ್ತಾರೆ– "ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನಿಂದ ಸಲಹೆ ಕೇಳಿದಾಗ ಸರಿಯಾದ ಸಲಹೆ ನೀಡದಿದ್ದರೆ ಸಹ ಅವನು ವಂಚನೆ ಮಾಡಿದವನಾಗುತ್ತಾನೆ." ಎಂದರೆ ಎಲ್ಲ ವಿಷಯಗಳನ್ನು ಪರಾಂಬರಿಸಿ ಸರಿಯಾದ ಸಲಹೆ ನೀಡದಿದ್ದರೆ ಅದು ವಂಚನೆಯಾಗಿದೆ.

ಆದುದರಿಂದ ಇಂತಹ ವಿಷಯಗಳಲ್ಲಿ ಬಹಳ ಜಾಗರೂಕತೆ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಮಾನತನ್ನು ಈಡೇರಿಸುವ ಬಗ್ಗೆ ಮತ್ತು ವಿಶ್ವಾಸ ವಂಚನೆ ಮಾಡದಿರುವ ಬಗ್ಗೆ ನಮ್ಮನ್ನು ಎಂತಹ ಉನ್ನತ ಮಟ್ಟದಲ್ಲಿ ನೋಡಲು

ಬಯಸುತ್ತಾರೆಂದರೆ ಅವರು ಒಂದು ಸ್ಥಳದಲ್ಲಿ ಹೇಳುತ್ತಾರೆ– “ಕೆಟ್ಟ ನೋಟದಿಂದ, ವಿಶ್ವಾಸ ವಂಚನೆಯಿಂದ, ಲಂಚ ರುಶುವತ್ತಿನಿಂದ ದೂರ ಸರಿಯದವರು ಮತ್ತು ಪ್ರತಿಯೊಂದು ನಿಷಿದ್ಧ ಕೆಲಸಗಳಿಂದ ದೂರ ಸರಿದು ಆ ಬಗ್ಗೆ ಪಶ್ಚಾತ್ತಾಪದಿಂದ ಕ್ಷಮೆ ಯಾಚಿಸದವನು ನನ್ನ ಜಮಾಅತಿಗೆ ಸೇರಿದವನಲ್ಲ. ಪತಿಯನ್ನು ವಂಚಿಸುವ ಪತ್ನಿ ಮತ್ತು ಪತ್ನಿಯನ್ನು ವಂಚಿಸುವ ಪತಿ ನನ್ನ ಜಮಾಅತಿಗೆ ಸೇರಿದವರಲ್ಲ.” ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ– “ಅಲ್ಲಾಹನನ್ನು ಏಕನೆಂದು ನಂಬುವುದರೊಂದಿಗೆ ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಧ್ವಂಸ ಮಾಡದಿರುವುದು ಕಡ್ಡಾಯವಾಗಿದೆ. ಒಬ್ಬನು ತನ್ನ ಸಹೋದರನ ಹಕ್ಕುಗಳನ್ನು ಧ್ವಂಸ ಮಾಡುವವನು ಮತ್ತು ವಂಚಿಸುವವನು **ಲಾ ಇಲಾಹ ಇಲ್ಲಲ್ಲಾಹ್** ಎಂಬುದನ್ನು ನಂಬುವವನಲ್ಲ. ಪವಿತ್ರ ಖುರ್ಆನ್ ತಖ್ವ (ಭಯಭಕ್ತಿ)ಯನ್ನು ಲಿಬಾಸ್ ಎಂದು ಹೆಸರಿಸಿದೆ. **ಲಿಬಾಸುತ್ತಖ್ವಾ** ಪವಿತ್ರ ಖುರ್ಆನಿನಲ್ಲಿ ಬಳಸಲಾದ ಶಬ್ದವಾಗಿದೆ. ಇದು ಸೂಚಿಸುವುದೇನೆಂದರೆ, ಆಧ್ಯಾತ್ಮಿಕ ಸೌಂದರ್ಯ ತಖ್ವದಿಂದಲೇ ದೊರಕುತ್ತದೆ ಎಂದು. ತಖ್ವ ಎಂದರೇನು? ಅಲ್ಲಾಹನ ಅಮಾನತುಗಳನ್ನು ಮತ್ತು ಅವನೊಂದಿಗೆ ಮಾಡಿದ ವಿಶ್ವಾಸದ ಪ್ರತಿಜ್ಞೆಗಳನ್ನು ಹಾಗೂ ಸೃಷ್ಟಿಗಳ ಎಲ್ಲ ಅಮಾನತುಗಳನ್ನು ಮತ್ತು ಅವರಿಗೆ ಸಂಬಂಧಿಸಿದ ಪ್ರತಿಜ್ಞೆಗಳನ್ನು ಪೂರ್ಣ ಸಾಮರ್ಥ್ಯದೊಂದಿಗೆ ಈಡೇರಿಸುವುದಾಗಿದೆ. ಅವುಗಳಿಗೆ ಸಂಬಂಧಿಸಿದ ಸೂಕ್ಷ್ಮಾತಿಸೂಕ್ಷ್ಮ ಪಾರ್ಶ್ವಗಳನ್ನು ಸಹ ಪೂರ್ಣವಾದ ಶ್ರದ್ಧೆಯಿಂದ ಈಡೇರಿಸಿಕೊಡಬೇಕು. ಅಮಾನತುಗಳಿಗೆ ಸಂಬಂಧಿಸಿ ಸೂಕ್ಷ್ಮಾತಿಸೂಕ್ಷ್ಮ ಪಾರ್ಶ್ವಗಳನ್ನು ಗಮನಿಸಿ ಈಡೇರಿಸಿ ಕೊಡುವವರಾಗಬೇಕು. ಅದಕ್ಕೋಸ್ಕರ ಪ್ರಯತ್ನ ಮಾಡಬೇಕು. ನಮ್ಮ ಹೊಣೆಗಾರಿಕೆಗೆ ನೀಡಲಾದ ಎಲ್ಲ ಸೃಷ್ಟಿಗಳು ಒಂದು ಅಮಾನತ್ ಆಗಿದೆ. ನಮ್ಮ ಹೊಣೆಗಾರಿಕೆಗೆ ನೀಡಲಾದ ಎಲ್ಲ ಕಡ್ಡಾಯ ಕರ್ತವ್ಯಗಳೂ ಒಂದು ಅಮಾನತ್ ಆಗಿದೆ. ಅವುಗಳನ್ನು ಈಡೇರಿಸಿಕೊಡುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಾವು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗಲು ಅವುಗಳನ್ನು ನಿರ್ವಹಿಸಬೇಕಾದುದು ಆವಶ್ಯಕವಾಗಿದೆ.”

ಆದುದರಿಂದ ಇವುಗಳ ಬಗ್ಗೆ ನಮ್ಮ ಪೈಕಿ ಪ್ರತಿಯೊಬ್ಬನೂ ಚಿಂತಿಸಬೇಕಾಗಿದೆ. ಈ ದಿನ ನಾನು ನಿಮಗೆ ವಿವರಿಸಲು ಬಯಸಿದ ಅಲ್ಲಾಹನ ಒಂದು ಆಜ್ಞೆ ಸಮಾಜದ ಸೌಂದರ್ಯವನ್ನು ಬೆಳಗಿಸುವಂತಹ ಒಂದು ಸಂಗತಿಯಾಗಿದೆ. ಅದೇನೆಂದರೆ, ಅಲ್ಲಾಹನು ಹೇಳುತ್ತಾನೆ: **ಅಲ್ಲಝೀನ ಯುನ್ಫಿಖೂನ ಫಿಸ್ಸರ್ರಾಯಿ ವಝ್ಝರ್ರಾಯಿ ವಲ್ ಕಾಝಿಮೀನಲ್ ಗೈಝ ವಲ್ ಆಫೀನ ಅನಿನ್ನಾಸ್ ವಲ್ಲಾಹು ಯುಹಿಬ್ಬುಲ್ ಮುಹ್ಸಿನೀನ್.**

“ಅವರು (ಆ ಸಜ್ಜನರು) ಏಳಿಗೆಯ ಕಾಲದಲ್ಲೂ, ಕಷ್ಟಕಾಲದಲ್ಲೂ ದೇವ ಮಾರ್ಗದಲ್ಲಿ ಧನವನ್ನು ಖರ್ಚು ಮಾಡುವವರೂ ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆ ನೀಡುವವರೂ ಆಗಿದ್ದಾರೆ. ಸಜ್ಜನರನ್ನು ಅಲ್ಲಾಹನು ಇಷ್ಟಪಡುತ್ತಾನೆ.” (ಪವಿತ್ರ ಖುರ್ಆನ್ 3: 135)

ನಾನು ಹಿಂದೆ ಹೇಳಿದ ಹಾಗೆ ಹಕ್ಕುಗಳನ್ನು ಈಡೇರಿಸಿ ಕೊಡುವುದು ಪ್ರತಿಯೊಬ್ಬ ಮುಸ್ಲಿಮನ ಕಡ್ಡಾಯ ಕರ್ತವ್ಯವಾಗಿದೆ. ಹಕ್ಕುಗಳನ್ನು ಈಡೇರಿಸಿಕೊಡುವ ಮಟ್ಟ ಹೇಗಿರಬೇಕೆಂದು ಅಲ್ಲಾಹನು ಈ ವಚನದಲ್ಲಿ ಸೂಚಿಸುತ್ತಾನೆ. ಅದು ಹಕ್ಕುಗಳ ಈಡೇರುವಿಕೆಯಿಂದಲೂ ಮುಂದೆ ಸಾಗಿ ತ್ಯಾಗಗಳನ್ನು ಮಾಡುವ ಮಟ್ಟಕ್ಕೆ ಮುಂದುವರಿಯುತ್ತದೆ. ಸಮಾಜದ ಸೌಂದರ್ಯ ಹೇಗಿರಬೇಕೆಂದರೆ, ಕೇವಲ ಹಕ್ಕುಗಳನ್ನು ಈಡೇರಿಸಿದರೆ ಸಾಕಾಗಲಾರದು. ಕೆಲವು ಸಂದರ್ಭಗಳಲ್ಲಿ ಹಕ್ಕುಗಳನ್ನು ಈಡೇರಿಸಿಕೊಡಲು ತ್ಯಾಗಗಳನ್ನೂ ಮಾಡಬೇಕಾಗುತ್ತದೆ. ಯಾವ ಸಮಾಜದಲ್ಲಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುತ್ತಾರೋ ಮತ್ತು ತ್ಯಾಗ ಮಾಡಿ ಹಕ್ಕುಗಳನ್ನು ನೀಡಲು ಪ್ರಯತ್ನಿಸುತ್ತಾರೋ ಅಂತಹ ಸಮಾಜ ಎಂತಹ ಮಟ್ಟಕ್ಕೆ ತಲಪುತ್ತದೆ ಎಂದರೆ ಅದನ್ನು “ಸ್ವರ್ಗ ಸಮ ಸಮಾಜ” ಎಂದು ಹೇಳಬಹುದಾಗಿದೆ. ಇದರ ದೃಶ್ಯ ನಮಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಿಷ್ಯರಲ್ಲಿ ಕಂಡುಬರುತ್ತದೆ. ಅವರ ಬಗ್ಗೆ ಅಲ್ಲಾಹನು ಪವಿತ್ರ ಖುರ್ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ವ ಯೂಸಿರೂನ ಅಲಾ ಅನ್ಫುಸಿಹಿಮ್ ವ ಲವ್ ಕಾನ ಬಿಹಿಮ್ ಖಸಾಸತುನ್.** “ತಮಗೆ ದಾರಿದ್ರ್ಯವಿದ್ದರೂ ಸಹ ಅವರು ತಮಗಿಂತ ಇತರರಿಗೆ ಆದ್ಯತೆ ನೀಡುತ್ತಾರೆ.”(ಪವಿತ್ರ ಖುರ್ಆನ್ 59: 10)

ಇಂತಹ ಯೋಚನೆ ಮತ್ತು ಕೆಲಸವಿದ್ದರೆ ತ್ಯಾಗ ಮನೋಭಾವ ಉಂಟಾಗುತ್ತದೆ. ತನ್ನ ಸ್ವಾರ್ಥ ಚಿಂತೆಗಳನ್ನು ಮನುಷ್ಯನು ಅದುಮಿಡುತ್ತಾನೆ. ಮತ್ತು ಅನ್ಯರಿಗೆ ಒಳಿತನ್ನು ಬಯಸುತ್ತಾನೆ. ಅವರಿಗೆ ಉಪಕಾರ ಮಾಡುತ್ತಾನೆ. ಈ ವೈಭವಶಾಲಿ ಗುಣದ ಅತ್ಯುತ್ತಮ ಉದಾಹರಣೆಯನ್ನು ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಕಾಣುತ್ತೇವೆ. ಅವರು ತಮ್ಮ ಪುತ್ರಿಯನ್ನು ಹತ್ಯೆ ಮಾಡಿದವರನ್ನೂ ಸಹ ಕ್ಷಮಿಸಿದರು. ಬೇರೆ ಅನೇಕ ಉದಾಹರಣೆಗಳು ಸಹ ಇವೆ. ಕೋಪವನ್ನು ನಿಯಂತ್ರಿಸುವ ಉತ್ತಮ ಸ್ವಭಾವ ಗುಣದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಶಿಷ್ಯರಿಗೆ ಉಪದೇಶಿಸಿದರು ಮತ್ತು ತರಬೇತಿ ನೀಡಿದರು.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: “ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನಗೋಸ್ಕರ, ತನ್ನ ವಿರುದ್ಧ ನಡೆಸಲಾದ ಯಾವುದಾದರೂ ಅಕ್ರಮ ಕೃತ್ಯಕ್ಕೋಸ್ಕರ ಎಂದೂ ಪ್ರತೀಕಾರ ಮಾಡಿರಲಿಲ್ಲ.”

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್ಆನಿನ ಈ ವಚನದ ಬಗ್ಗೆ ಹೀಗೆ ಹೇಳುತ್ತಾರೆ: “ಸತ್ಯವಿಶ್ವಾಸಿ ಕೋಪವನ್ನು ತಿಂದು ಬಿಡುತ್ತಾನೆ.

ದೌರ್ಜನ್ಯಗಾರರನ್ನು ಕ್ಷಮಿಸುತ್ತಾನೆ. ತಪ್ಪು ಕೆಲಸಕ್ಕೆ ವಿರುದ್ಧವಾಗಿ ತಪ್ಪು ಕೆಲಸ ಮಾಡುವುದಿಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಮಾಅತಿಗೆ ಉಪದೇಶ ನೀಡುತ್ತಾ ಈರೀತಿ ಹೇಳಿದರು: "ಈ ಜಮಾಅತನ್ನು ಸ್ಥಾಪಿಸಿದ ಉದ್ದೇಶ ನಾಲಗೆ, ಕಣ್ಣು ಮತ್ತು ಕಿವಿಯಿಂದ ಮತ್ತು ಪ್ರತಿಯೊಂದು ಅವಯವದಿಂದ ತಖ್ವ (ಭಯಭಕ್ತಿ) ಹೊರ ಸೂಸಲಿಕ್ಕಾಗಿದೆ. ತಖ್ವದ ಪ್ರಕಾಶ ಪ್ರತಿಯೊಂದು ಅಂಗದ ಒಳಗೂ ಹೊರಗೂ ಇರುವಂತಾಗಬೇಕು. ಉತ್ತಮ ನೈತಿಕ ಗುಣಗಳ ಉನ್ನತ ಉದಾಹರಣೆಯಾಗಬೇಕು. ಅನಾವಶ್ಯಕ ಕೋಪ ಮೊದಲಾದವುಗಳು ಸಂಪೂರ್ಣವಾಗಿ ಇಲ್ಲದಾಗಬೇಕು"

ಪ್ರತಿಯೊಂದು ಜಮಾಅತಿನ ಸುಧಾರಣೆ ಮೊತ್ತಮೊದಲು ಸ್ವಭಾವದ ಪರಿಷ್ಕರಣೆಯಿಂದ ಪ್ರಾರಂಭವಾಗುತ್ತದೆ. ಆರಂಭದಲ್ಲಿ ಸಹನೆಯಿಂದ ತರಬೇತಿಯಲ್ಲಿ ಮುಂದುವರಿಯಬೇಕು. ಅತ್ಯಂತ ಉತ್ತಮ ವಿಧಾನವೇನೆಂದರೆ ಯಾರಾದರೂ ಬೈದರೆ ಅವನಿಗೋಸ್ಕರ ಅಲ್ಲಾಹನೊಂದಿಗೆ ನೋವಿನೊಂದಿಗೆ ಪ್ರಾರ್ಥಿಸುವುದಾಗಿದೆ. ಅವನ ಸ್ವಭಾವ ಸುಧಾರಣೆ ಆಗಲಿ ಎಂದು ಪ್ರಾರ್ಥಿಸಬೇಕು. ಹೃದಯದಲ್ಲಿ ಅಸೂಯೆಯನ್ನು ಎಂದೂ ಬೆಳೆಯಿಸಬಾರದು. ಲೌಕಿಕ ನಿಯಮಗಳಿರುವ ಹಾಗೆಯೇ ದೈವಿಕ ನಿಯಮಗಳೂ ಇರುತ್ತವೆ. ಲೋಕ ತನ್ನ ನಿಯಮಗಳನ್ನು ಬಿಟ್ಟು ಬಿಡದಿರುವಾಗ ಅಲ್ಲಾಹನು ತನ್ನ ನಿಯಮಗಳನ್ನು ಹೇಗೆ ಬಿಟ್ಟು ಬಿಡುವನು. ನಿಮ್ಮಲ್ಲಿ ಬದಲಾವಣೆ ಆಗದಿರುವ ತನಕ ಅಲ್ಲಾಹನ ಸನ್ನಿಧಿಯಲ್ಲಿ ನಿಮ್ಮನ್ನು ಪರಿಗಣಿಸಲಾಗದು. ಸಹನೆ ಮತ್ತು ಕ್ಷಮೆ ಎಂಬ ಶ್ರೇಷ್ಠ ಗುಣಗಳ ಸ್ಥಾನದಲ್ಲಿ ಕ್ರೌರ್ಯವನ್ನು ಅಲ್ಲಾಹನು ಎಂದೂ ಇಷ್ಟಪಡಲಾರನು. ನೀವು ಉತ್ತಮ ನೈತಿಕ ಗುಣಗಳಲ್ಲಿ ಅಭಿವೃದ್ಧಿ ಹೊಂದುವುದಾದರೆ ನೀವು ಬಹಳ ಬೇಗ ಅಲ್ಲಾಹನ ಸಾಮೀಪ್ಯ ಪಡೆಯುವವರಾಗುವಿರಿ.

ಈ ರಮಝಾನ್ ತಿಂಗಳಲ್ಲಿ ನಮ್ಮ ಆರಾಧನೆಗಳ ಮಟ್ಟ ವರ್ಧಿಸುವಂತೆ ಮಾಡಲು ಮತ್ತು ಅದನ್ನು ಸ್ಥಿರವಾಗಿ ಇರಿಸಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ. ಅದೇರೀತಿ ನಮ್ಮ ಸ್ವಭಾವಗುಣಗಳನ್ನು ಮತ್ತು ಹಕ್ಕುಗಳನ್ನು ಈಡೇರಿಸುವ ಮಟ್ಟವನ್ನು ಸ್ಥಿರಪಡಿಸಲು ಸಹ ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಮ್ಮ ಜಮಾಅತಿನಲ್ಲಿ ಯಾವುದಾದರೂ ಕೆಲಸದಲ್ಲಿ ನಿಯುಕ್ತರಾದವರು ಎಲ್ಲರಿಗಿಂತ ತಮ್ಮ ಉತ್ತಮ ಮಾದರಿ ತೋರಿಸುವವರಾಗಲಿ. ಮನೆಗಳಲ್ಲೂ ಹೊರಗೆಯೂ ಹೀಗಾಗಲಿ. ನಾನು ಪುನಃ ಪ್ರಾರ್ಥನೆ ಬಗ್ಗೆ ನಿಮ್ಮ ಗಮನ ಸೆಳೆಯುತ್ತಿದ್ದೇನೆ. ನಾನು ರಮಝಾನಿನ ಪ್ರಥಮ ಖುತ್‍ಬದಲ್ಲಿ ಇದರ ಬಗ್ಗೆ ಸಂಕ್ಷಿಪ್ತವಾಗಿ ಪ್ರಾಸ್ತಾಪಿಸಿದ್ದೆ. ಜಮಾಅತಿನ ಅಭಿವೃದ್ಧಿ ಮತ್ತು ಶತ್ರುಗಳ ಅಪಾಯಕರ ಯೋಜನೆಗಳಿಂದ ರಕ್ಷಣೆ ಪಡೆಯಲು ಬಹಳವಾಗಿ ಪ್ರಾರ್ಥಿಸಿರಿ. ಇಸ್ಲಾಮಿನ ವಿಜಯಕ್ಕೋಸ್ಕರ ಸಹ ಪ್ರಾರ್ಥಿಸಿರಿ. ನಿಮ್ಮ ಸ್ವಂತಕ್ಕೋಸ್ಕರ ಪ್ರಾರ್ಥಿಸುವಾಗ ಈ ಪ್ರಾರ್ಥನೆಗಳನ್ನು ಸಹ ಮಾಡಿರಿ. ಅಲ್ಲಾಹನು ನಮಗೆಲ್ಲರಿಗೂ ಹೀಗೆ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

---------------*****---------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 03-07-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon